


ಫ್ಯಾನು ಎಂದು ತಲೆಯೆತ್ತಿದರೆ, ಹುಡುಗಿ. "ನೀವು ಜಗಜೀತಸಿಂಗನನ್ನು ಕೇಳುತ್ತೀರಾ, ನಾನು ಅವರ ಬಿಗ್ ಫ್ಯಾನು" ಅಂದು ತನ್ನ ಪರಿಚಯ ಮಾಡಿಕೊಂಡ. ಪರಸ್ಪರ ಪರಿಚಯವಾದ ಮೇಲೆ ಆವತ್ತು ಮೆಸ್ಸಿನಲ್ಲಿ ಊಟವಾದ ಮೇಲೂ ಅರ್ಧಗಂಟೆ ಬರೀ ಜಗಜೀತಸಿಂಗನ ಗಝಲುಗಳ ಬಗ್ಗೆಯೇ ಮಾತಾಡಿದರು. ಆಮೇಲೆ ಆಗಾಗ ಮೆಸ್ಸಿನಲ್ಲಿ, ಆಸ್ಪತ್ರೆಯಲ್ಲಿ ಸಿಕ್ಕಿದಾಗ ಮಾತಾಡುತ್ತಿದ್ದರು. ಆಮೇಲೆ ಮಾತಾಡುವ ಸಲುವಾಗಿಯೇ ಸಿಗತೊಡಗಿದರು. ಕೆಲವೇ ತಿಂಗಳುಗಳಲ್ಲಿ ಒಟ್ಟಿಗೇ ಇರಲು ಶುರು ಮಾಡಿದರು. ಜಸ್ಸಿಗೆ ಇವನೇನೂ ಮೊದಲನೇ ಬಾಯ್‌ಫ್ರೆಂಡ್ ಆಗಿರಲಿಲ್ಲ. ಎಂ.ಬಿ.ಬಿ.ಎಸ್. ಮಾಡುವಾಗಿನ ಪ್ರಿಯಕರ ಕೈಬಿಟ್ಟಿದ್ದ. ಜಸ್ಸಿ ಹೊಸ ಜೀವನದ ಹುಡುಕಾಟದಲ್ಲಿದ್ದಳು. ಪ್ರಾಣೇಶನಿಗೆ ಅವೆಲ್ಲವನ್ನೂ ಮುಚ್ಚುಮರೆಯಿಲ್ಲದೇ ಹೇಳಿದ್ದಳು ಕೂಡ. ಪ್ರಾಣೇಶನಿಗೆ ಇವೆಲ್ಲ ಮೊದಲ ಅನುಭವ. 'ಮದುವೆ' ಎಂಬ ಬಂಧನವಿಲ್ಲದೇ ಇದೆಲ್ಲ ತನ್ನ ಜೀವನದಲ್ಲೂ ಆಗುತ್ತದೆ ಎಂದು ಕನಸು ಮನಸಿನಲ್ಲೂ ಎಣಿಸಿರದ ಪ್ರಾಣೇಶ ಜಸ್ಸಿಯ ಪ್ರೀತಿ–ಪ್ರಣಯ–ಕಾಮಗಳಲ್ಲಿ ತೇಲಿಹೋದ. ಇಬ್ಬರಿಗೂ ಕೈತುಂಬ ಸಂಬಳ ಬರುತ್ತಿತ್ತು. ವೀಕೆಂಡುಗಳು ಚಂಡೀಗಡದ ಸೆಕ್ಟರ್ 15 ಮತ್ತು 17ರ ರೆಸ್ಟೋರಂಟುಗಳಲ್ಲಿ, ಪಬ್ಬುಗಳಲ್ಲಿ ಕಳೆದುಹೋಗುತ್ತಿದ್ದವು. ಕುಡಿಯುವುದನ್ನು ಮತ್ತು ಮಾಂಸ ತಿನ್ನುವುದನ್ನು ಕಲಿತ.

ಪ್ರಾಣೇಶನ ಎಂ.ಎಸ್. ಮುಗಿದ ಮೇಲೆ ಜಸ್ಸಿ ಇಂಗ್ಲೆಂಡಿಗೆ ಹೋಗೋಣ ಎಂದು ದುಂಬಾಲು ಬಿದ್ದಳು. ಇಷ್ಟೆಲ್ಲ ನಡೆಯುತ್ತಿದ್ದರೂ ಬಾಗಲಕೋಟೆಯಲ್ಲಿ ತಂದೆ ಕೂರ್ಮಾಚಾರರಿಗೆ ಮತ್ತು ತಾಯಿ ಸಾವಿತ್ರಿಯವರಿಗೆ (ಈಗ ಇಬ್ಬರೂ ವೈಕುಂಠವಾಸಿಗಳಾಗಿ ವರ್ಷಗಳೇ ಆಗಿವೆ) ಇದರ